ISSN: 2347-2723 IMPACT FACTOR : 2.0260(UIF) VOLUME - 4 | ISSUE - 9 | APRIL - 2017

REVIEW OF LITERATURE

# ದಲಿತ ಚಳವಳಿ ಮತ್ತು ಬುದ್ಧ, ಬಸವ, ಅಂಬೇಡ್ಕರ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ




ದಲಿತ ಚಳವಳಿ ಎಂದಾಕ್ಷಣ ಕೆಳವರ್ಗದವರು ಮಾಡುವ ಹೋರಾಟವೆಂದೇ ಅರ್ಥೈಸುತ್ತೇವೆ. 'ದಲಿತರು' ಎಂದರೆ ಯಾರು? ಎನ್ನುವ ಮೂಲ ಪ್ರಶ್ನೆ ನಮ್ಮನ್ನು ಕಾಡುತ್ತದೆ. 'ದಲಿತರು' ಎಂದರೆ ತುಳಿತಕ್ಕೆ ಒಳಪಟ್ಟವರು. ಮೇಲ್ಜಾತಿಯವರಿಂದ ಶೋಷಣೆಗೊಂಡ ಶೂದ್ರರು ಎಂದು ಸಾಮಾನ್ಯ ಅರ್ಥದಲ್ಲಿ ಹೇಳುತ್ತೇವೆ. ವಿದ್ವಾಂಸರ ಪ್ರಕಾರ 'ಶತಮಾನಗಳಿಂದ' ಜನ ಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ, ಊರ ಹೊರಗೆ ವಾಸಿಸಿಕೊಳ್ಳುವ ಕೀಳು ವೃತ್ತಿಗೆ ಅವಲಂಬಿತರಾಗಿ ಬಹಿಷ್ಕೃತರೆನಿಸಿಕೊಂಡವರೆಲ್ಲರು ದಲಿತರೆನಿಸಿಕೊಳ್ಳುತ್ತಾರೆ' ಎಂದು ಅಭಿಪ್ರಾಯ ಪಡುತ್ತಾರೆ.

ದಲಿತ ಎನ್ನುವ ಪದವು 'ದಲ' ಎಂಬ ಸಂಸ್ಕೃತದ ಪದ 'ದಲ' ಎಂದರೆ ತುಂಡು, ಸೈನ್ಯ, ಚೂರು, ಭಾಗ ಎನ್ನುವ ಅರ್ಥಗಳಿವೆ. ಸೈನ್ಯದ ಹರಿತವಾದ ಶಸ್ತ್ರ ಎನ್ನುವ ಅರ್ಥ, ಸಮಂಜಸವೆಂದು ಕೆಲವರು ಮಂಡಿಸುತ್ತಾರೆ. ಇನ್ನೂ ಕೆಲವರು ದಲಿತರೆಂದರೆ ದಮನಕ್ಕೆ ಒಳಗಾದವರು ಎಂದು ಅರ್ಥವನ್ನು ಕೊಡುವ ರೀತಿಯಲ್ಲಿ ಪರಿಗಣಿಸಿದ್ದಾರೆ. 'ಚಳವಳಿ' ಎಂದರೆ ಕ್ರಾಂತಿ, ಪ್ರತಿಭಟನೆ, ಹೋರಾಟ, ಎಂದು ಅರ್ಥೈಸುತ್ತೇವೆ. ವಾಸ್ತವಿಕವಾಗಿ ನೋಡಿದಾಗ ದಲಿತ ಸಂಘರ್ಷ ಸಮಿತಿಯ ನಿಲುವುಗಳು, ತುಳಿತಕ್ಕೆ ಒಳಗಾದ ಜನ ಸಮೂಹಕ್ಕೆ ಒಂದು ಹೊಸ ಆಯಾಮವನ್ನು ಒದಗಿಸಿಕೊಟ್ಟಿದೆ. ದಲಿತ ಚಳವಳಿಯ ಆಧುನಿಕ ನೇತಾರ ಚಳವಳಿ ತತ್ವ ಪ್ರಣಾಳಿಕೆಯನ್ನು, ಸಿದ್ದಾಂತವನ್ನು, ಸಮಾಜದ ಶೋಷಿತ ಜನತೆಗೆ ತಲುಪಿಸಲು ಅನೇಕ ಸಮಾಜ ಚಿಂತಕರ ನಡುವೆ. ಡಾ.ಅಂಬೇಡ್ಕರ ಒಬ್ಬ ಸಮರ್ಥ ದಲಿತ ಚಳವಳಿಯ ಹೋರಾಟಗಾರರಾಗಿದ್ದಾರೆ. ಅಹಿಂಸಾತ್ಮಕವಾಗಿ ಹಾಗೂ ಪ್ರಜಾಸತ್ತಾತ್ಮಕವಾಗಿ ಹೋರಾಟ ಮಾಡಿದವರಲ್ಲಿ ಪ್ರಥಮರು.

ಗೌತಮ ಬುದ್ಧ ಹುಟ್ಟಿ (ಕ್ರಿಪೂ.560–480) ಇಲ್ಲಿಯವರೆಗೆ ಎರಡುವರೆ ಸಾವಿರದ ಎಂಬತ್ತೆಂಟು ವರ್ಷಗಳ ಮೇಲಾಗಿವೆ. ದೀರ್ಘಾವಧಿಯಲ್ಲಿ ಅವನು ಪ್ರಭಾವಿಸಿದ ಮನಸ್ಸೆಲ್ಲ ಪ್ರಪಂಚದ ಸಾಹಿತ್ಯ ಕಲೆ, ವಿಜ್ಞಾನಗಳೆಲ್ಲ ಅವನ ಬೆಳಕಿನಿಂದ ಪಲ್ಲವಿಸಿವೆ. ಇಪ್ಪತ್ತನೆಯ ಶತಮಾನ ಕಂಡ ಮಹಾಮೇದಾವಿಯಾದ ತತ್ವಜ್ಞಾನ ಬರ್ಟ್ರೆಂಡ್ ರಸಲ್ ಮತ್ತು ಮಹಾಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ ಅವರುಗಳು ಬುದ್ಧ ಧರ್ಮವೇ ನಾಳಿನ ಮಾನವ ಜನಾಂಗದ ಧರ್ಮವಾಗುತ್ತದೆ ಎಂದು ಪ್ರವಾದಿಗಳಂತೆ ನುಡಿದಿರುವರು. ಅಸ್ಪೃಶ್ಯತೆಯ ಅಸಮಾನತೆಯ ಪ್ರವೃತ್ತಿಯನ್ನು ತಾವಾಗಿ ವಿರೋಧಿಸಿದವರಲ್ಲಿ ಬುದ್ಧನು ಮೊದಲಿಗ. ಆತ ಜಾತಿ ವರ್ಣವನ್ನು ಪರಿಗಣಿಸದೆ ಎಲ್ಲರಿಗೂ ತನ್ನ ಧರ್ಮದಲ್ಲಿ ಪ್ರವೇಶವನ್ನು ಕೊಟ್ಟನು. ಇದು ನಮ್ಮ ಶ್ರೇಣಿಕರಣಗೊಂಡ ಸಮಾಜ ವ್ಯವಸ್ಥೆಯ ಮೇಲೆ ನಡೆದ ಮೊದಲ ದಾಳಿ. ಕಸಗುಡಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಉಳಿದವರೆಲ್ಲ ಕೀಳಾಗಿ ಕಂಡಾಗ ಬುದ್ಧನು ಆ ವ್ಯಕ್ತಿಯನ್ನು ಗೌರವಿಸಿದ ಸಂಗತಿ ಜನ ಜನಿತವಾಗಿದೆ.

ಅವನ ಶಿಷ್ಯ ಆನಂದನು ಅಮ್ರಾಪಾಲಿ ಎಂಬ ಚಾಂಡಲ ಮಹಿಳೆಯಿಂದ ನೀರನ್ನು ಸ್ವೀಕರಿಸಿ ಕುಡಿದ ಘಟನೆಯು ಅಷ್ಟೇ ಪ್ರಸಿದ್ಧವಾಗಿದೆ. ಈ ಬಗೆಯ ಉದಾರವಾದಿ ಧೋರಣೆಯನ್ನು ಆಗಿನ ಕಾಲಕ್ಕೆ ದೊಡ್ಡ ಪ್ರಮಾಣದ ಸುಧಾರಣೆ ಎಂದೆ ಭಾವಿಸಬಹುದು. ರಾಜ್ಯವನ್ನು ತ್ಯಾಗಮಾಡಿ ಬೋಧಿಪಡೆದು ಬುದ್ಧನಾದನು. ನಂತರ ನಲ್ವತ್ತೈದು ವರ್ಷಗಳ ಕಾಲ ಭಗವಾನ್ ಗೌತಮ ಬುದ್ಧರು ಧಮ್ಮವನ್ನು ಭೋಧಿಸಿದರು. ಸಮಾಜವನ್ನು ತಿದ್ದಲು ಮೇಲು ಕೀಳುಗಳನ್ನು ಹೋಗಲಾಡಿಸಲು ಗೌತಮ ಬುದ್ಧ ಧಮ್ಮವನ್ನು ಭೋಧಿಸುವಾಗ ಒಟ್ಟು 547 ಕಥೆಗಳನ್ನು ಹೇಳಿದ್ದಾನೆ. ಎಂಥಹ ಕ್ಲಿಷ್ಟಕರವಾದ ಮತ್ತು ಶುಷ್ಕವಾದ ಉಪಾಯಗಳನ್ನು ಹಾಗೂ ಭಾವನೆಗಳನ್ನು ಆಸಕ್ತಿ, ಕುತೂಹಲ, ರಂಜನೀಯ ಅಥವಾ ಬೋದಕಪ್ರಾಯಾವಾಗಿ ಹೇಳಲು ಬುದ್ಧರು ಕಥಾತಂತ್ರವನ್ನು ಉಪಯೋಗಿಸಿಕೊಂಡಿದ್ದಾರೆ. ಹಾಗೆಯೇ ತಾವು ಹೇಳುವ ಕಥೆಗಳನ್ನು ಅತ್ಯಂತ ಕಲಾತ್ಮಕ, ನಾಟಕೀಯ ವೈಜ್ಞಾನಿಕ ಮತ್ತು ವೈಚಾರಿಕವಾಗಿ ಎರಡು ಸಾವಿರ ಐನೂರು ವರ್ಷಗಳ ಹಿಂದೆಯೂ ಹೇಳಿದ್ದಾರೆ.

ಈ ವಿಧಾನವನ್ನು ಬುದ್ಧರ ನಂತರ ಬಂದ ಜಗತ್ತಿನ ಪ್ರಮುಖ ಮತ ಸಂಸ್ಥಾಪಕರು, ತತ್ವ ಭೋಧಕರು, ಋಷಿಮುನಿಗಳು, ಗುರುಗಳು ಮತ್ತು ಸಮಾಜ ಸುಧಾರಕರು ಅನುಕರಿಸಿದರು ಆದರೆ ಅವರ್ಯಾರು ಬುದ್ದರಂತೆ ನಿಸ್ವಾರ್ಥದಿಂದ ಕೂಡಿದ ಸರಳ ಸತ್ಯಗಳನ್ನು ಹೇಳಲು ಮುಂದಾಗಲಿಲ್ಲ ಬದಲಿಗೆ ನಾನು ಹೇಳುತ್ತಿರುವುದೇ ಸರಿ, ನನ್ನನ್ನ ನಂಬಿರಿ, ನಾನೇ ಅಂತಿಮ ನನ್ನಿಂದ ಮಾತ್ರ ಮುಕ್ತಿ, ನಾನೇ ದೇವರು ಅಥವಾ ದೇವರ ಪ್ರತಿನಿಧಿ ಎಂಬ ಸರ್ವಾಧಿಕಾರಿ ಧೋರಣೆಯನ್ನು ಪ್ರತಿಪಾದಿಸಿದ್ದಾರೆ. ಆದರೆ ಬುದ್ಧರು ಎಲ್ಲಿಂದ ನಂಬಿಕೆಯನ್ನು 'ಇರುವಿಕೆ' ಎಂದು ಪ್ರತಿಪಾದಿಸಲಿಲ್ಲ. ಆತನ ತತ್ವಸಿದ್ದಾಂತದಲ್ಲಿ ಎಂಬುವುದು ಮೌಢ್ಯದಿಂದ ತಲೆಬಾಗುವುದು, ಪೂಜಿಸುವುದು, ದರ್ಶಿಸುವುದು, ಭಕ್ತಿ ಭಾವಗಳ ಅತಿರೇಖ, ಮಂತ್ರೋಚ್ಚರಣೆ, ದೇವರ, ಅಖಂಡವರ್ಣಣೆ, ಸುತ್ತಿ, ವ್ರತ ಮತ್ತು ಕಾಣಿಕೆಯನ್ನು ಸಮರ್ಪಿಸುವ ಬಾಹ್ಯ ಡಂಬಾಚಾರದ ಸಂಪ್ರದಾಯವಿಲ್ಲ. ಇಲ್ಲಿ ಪ್ರಾಯೋಗಿಕ ವಿಧಾನವೊಂದೆ ಪ್ರಧಾನವಾಗಿದೆ. ಬುದ್ಧರದು ಸದಾ ಸತ್ಯ ಮತು ್ತಬೆಳಕಿನ ಮಾರ್ಗವಾಗಿದೆ.

ಬಸವ್ಣನವರು 12ನೇ ಶತಮಾನದಲ್ಲಿ ಬುದ್ಧನ ನಂತರ ಧ್ವನಿ ಎತ್ತಿದ ಮಹಾಪುರುಷರು, ಕ್ರಾಂತಿಕಾರಿಯಾದ ಬಸವಣ್ಣ ಅನುಭವಮಂಟಪವನ್ನು ಸ್ಥಾಪಿಸಿ ಮೇಲು ಕೀಳೆನ್ನದೆ ಎಲ್ಲಾ ಜಾತಿ ಜನಾಂದವರಿಗೂ ಸಮಾನ ಅವಕಾಶ ಕೊಟ್ಟರು ಮಾದರಹರಳಯ್ಯ, ನುಲಿಚಂದಯ್ಯ, ಆಯ್ದಕ್ಕಿ ಲಕ್ಕಮ್ಮ, ಸುಳೆಸಂಕವ್ವೆ, ಮುಂತಾದವರನ್ನು ಅನುಭವ ಮಂಟಪದಲ್ಲಿ ಎಲ್ಲರಿಗೂ ಅವಕಾಶಕೊಟ್ಟರು.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನ್ನೋದಿ ಹಾರುವನಾದ ಎಂದು ಹೇಳುವಲ್ಲಿ ಬಸವ್ಣನವರು ಜಾತಿ ಪದ್ಧತಿಯ ವೃತ್ತಿ ಮೂಲ ಗುಣವನ್ನು ಮೂಲವಾಗಿ ಗುರುತಿಸಿದ್ದಾರೆ. ಅಸ್ಪೃಶ್ಯತೆ ತೊಡೆದು ಹಾಕಲು ಬಸವಣ್ಣನವರು ಮಾಡಿದ ಪ್ರಯತ್ನ ಅತ್ಯಂತ ಮಹತ್ವವಾದದ್ದು ಇತಿಹಾಸದಲ್ಲಿ ಮೊಟ್ಟಮೊದಲಬಾರಿಗೆ ಅಂತರಜಾತಿ ವಿವಾಹವೊಂದನ್ನು ಬೆಂಬಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. 'ಉತ್ತಮ ಕುಲದಲ್ಲಿ ಹುಟ್ಟಿದೆ'ನೆಂದು ಕಷ್ಟತನ ಹೊರೆಯ ಹೊರಿಸದಿರಯ್ಯ' ಎಂಬ ಅವರ ಮಾತು ಪ್ರಮಾಣಿವಾದದ್ದು.

'ಕೊಲ್ಲುವವನೆ ಮಾದಿಗ
ಹೊಲಸು ತಿಂಬುವವನೆ ಹೊಲೆಯ
ಕುಲವೇನು ಆವಂದಿರ ಕುಲವೇನು
ನಮ್ಮ ಕೂಡಲ ಸಂಗನ ಶರಣರೆ ಕುಲಜರು'

ಸಾಮಾಜಿಕ ಹೋರಾಟ ಕುಲಗೋತ್ರ ವರ್ಣ ವರ್ಗಗಳನ್ನು ಉಚ್ಚ-ನೀಚ ಭೇದ ಭಾವಗಳನ್ನು ಅರ್ಥವತ್ತಾದ ನೆಲೆಯಲ್ಲಿ ಬಸವಣ್ಣನವರು ಖಂಡಿಸಿದರು. ಮಾನವರಲ್ಲದೆ ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸಿದ ಬಸವಣ್ಣನವರು ಜಾತಿ ಮತಗಳ ವೈಷಮ್ಯದ ವಿರುದ್ಧ ಸಮಾಜದಲ್ಲಿ ಸಮಾನತೆ ತರಲು ಮಾಡಿದ ಪ್ರಯತ್ನ ಅಪೂರ್ವವಾದದ್ದು.

'ಸಮಾಜೋಧಾರ್ಮಿಕ ನೆಲೆಯಲ್ಲಿ ಕ್ರಾಂತಿಯನ್ನು ಮಾಡಿದ ಬಸವಾದಿ ಶರಣರ ವಚನ ಚಳವಳಿ ದೇಶದಲ್ಲಿಯೇ ಮಾದರಿಯಾಗಿ ಉಳಿದಿರಂತಹದ್ದು, ಅಸ್ಪೃಶ್ಯತೆಯಂತಹ ಕ್ರೂರ ವ್ಯವಸ್ಥೆಯನ್ನು ಹೋಗಲಾಡಿಸುವಲ್ಲಿ ದಿಟ್ಟ ಚಿಂತನೆಗಳ ಮೂಲಕ ಯಶಸ್ಸನ್ನು ಪಡೆಯಿತು. ಸನಾತನರ ಕುತಂತ್ರಕ್ಕೆ ಬಲಿಯಾಗಿ ಊರಾಚೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದ ಅಸ್ಪೃಶ್ಯರನ್ನು ಶರಣತ್ವದೆಡೆಗೆ ನಡೆಸಿದ ನೇತೃತ್ವ ಕ್ರಾಂತಿ ಅದೊಂದು ಮಾನವ ಕುಲಕ್ಕೆ ಮಹತ್ತರ ಕೊಡುಗೆ ನೀಡಿದೆ.

ಅಂಬೇಡ್ಕರರು ಶಿಕ್ಷಣ, ಸಂಘಟನೆ, ಮತ್ತು ಹೋರಾಟದಲ್ಲಿ ಭರವಸೆಯುಳ್ಳವರಾಗಿದ್ದರೆ, ಅಂಬೇಡ್ಕರರವರ ಘೋಷಣೆಯಂತೆ 'ರಾಜಕೀಯ ರಚನೆಯ ಸಾಮಾಜಿಕ ರಚನೆಯ ಮೇಲೆ ನಿಲ್ಲುತ್ತದೆ. ಎಂದು ಹೇಳಲು ಯಾವುದೇ ಸಮರ್ಥನೆ ಬೇಕಿಲ್ಲ. ವಾಸ್ತವವಾಗಿ ರಾಜಕೀಯ ರಚನೆಯ ಮೇಲೆ ಸಾಮಾಜಿಕ ರಚನೆಯ ಮೇಲೆ ಅಪಾರವಾದ ಪ್ರಭಾವ ಬೀರುತ್ತದೆ. ಆದು ರಾಜಕೀಯ ಕಾರ್ಯ ಕ್ಷಮತೆಯಲ್ಲಿ ಬದಲಾವಣೆ ತರಬಹುದು ಎಂಬ ವಿಚಾರ ಅಂಬೇಡ್ಕರದಾಗಿತ್ತು.

ಡಾ ಅಂಬೇಡ್ಕರ್ ಅವರ ಹೋರಾಟ ಮೊದ ಮೊದಲು ಮಹಾರಾಷ್ಟ್ರದ ಮಹಾರ್ ಜನಾಂಗದ ಸಮಸ್ಯೆಗಳಿಗಷ್ಟೆ ಸೀಮಿತಗೊಂಡಿದ್ದರೂ ಮುಂದೆ ಆ ಹೋರಾಟದ ಸಫಲತೆಗಾಗಿ ಕೆಳವರ್ಗದ ಎಲ್ಲಾ ಶೋಷಿತರ ಪರವಾಗಿ ತೀವ್ರತರವಾಗಿ ಬೆಳೆದು ಬಂದಿತು. 1927 ಮಾರ್ಚ 19,20ರಲ್ಲಿ ಹಮ್ಮಿಕೊಂಡ ಮಹಾಡ್ ಕರೆಯ ನೀರಿನ ಬಳಕೆಯ ಸತ್ಯಾಗ್ರಹ ಪ್ರಮುಖ ಆಂದೋಲನವಾಗಿದೆ. ಕೆರೆಯ ನೀರನ್ನು ಬಳಸಿದ್ದು ಮತ್ತು 'ಮನುಸ್ಮೃತಿ'ಯನ್ನು ತನ್ನ 25 ಸಾವಿರ ಅನುಯಾಯಿಗಳ ಸಮ್ಮುಖದಲ್ಲಿ ಸುಟ್ಟದ್ದು. ಮಹಾರಾಷ್ಟ್ರದ ತುಂಬಾ ಚಳವಳಿಯ ತೀವ್ರತರವಾಗಿ ಹರಡಿತು. 1930 ರ ಮಾರ್ಚ 2 ರಂದು ನಡೆಸಿದ ಕಾಳರಾಂ ದೇವಾಲಯ ಪ್ರವೇಶದ ಸತ್ಯಾಗ್ರಹ ಕೂಡ ಮಹತ್ವದ್ದಾಗಿದೆ.

1942 ರಲ್ಲಿ ಅಖಿಲಭಾರತ ಅನುಸೂಚಿತ ಜಾತಿಗಳ ಒಕ್ಕೂಟ ರಚಿಸಿ, ದಲಿತರಿಗಾಗಿ ಭೂಮಿಯನ್ನು ರಾಷ್ಟೀಕರಣಗೊಳಿಸುವ, ಕೈಗಾರಿಕೆಗಳನ್ನು ರಾಷ್ಟೀಕರಣಗೊಳಿಸುವ ಚಳವಳಿ ಪ್ರಾರಂಭಿಸಿದ್ದರು. 'ಚರಿತ್ರೆಯನ್ನು ಸಾಫಲ್ಯ ವೈಫಲ್ಯಗಳ ದೃಷ್ಟಿಯಲ್ಲಿ ನೋಡಿದರು ಅಸ್ಪೃಶ್ಯರ ಕತ್ತಲು ಪಯಣಕ್ಕೆ ದಿಕ್ಕಾದ'ದ್ದು ಅಂಬೇಡ್ಕರರ ರಾಷ್ಟ್ರ ಮಟ್ಟದಲ್ಲಿನ 1920 ರಿಂದ 1946 ರ ವರೆಗಿನ ಹೋರಾಟಗಳು ಕರ್ನಾಟಕದಲ್ಲಿಯೇ ಅವರ ಪ್ರಭಾವ ಮೇಲ್ಮಟ್ಟದಲ್ಲಷ್ಟೇ ಉಳಿದು ರಾಜಕೀಯ ಪ್ರವೇಶಿಸಿದವರಿಗಷ್ಟೇ ಸ್ಪೂರ್ತಿಯಾಗಿದ್ದರು.

ಜಾತಿಯತೆಯಿಂದ ಅಸ್ಪೃಶ್ಯರನ್ನು ಹೀನಾಯವಾಗಿ ಕಾಣುವ ಹಿಂದುಧರ್ಮದ ವಿರುದ್ಧ ತಮ್ಮ ಹೋರಾಟವನ್ನು ಪತ್ರಿಕೆಗಳ ಮೂಲಕ ಪ್ರಾರಂಭಿಸಿದರು. ಮೂಕನಾಯಕ (1920), ಬಹಿಷ್ಕೃತ ಭಾರತ, ಜನತಾ, ಪ್ರಬುದ್ಧ ಭಾರತ್, ಈ ಪತ್ರಿಕೆಗಳಿಂದ ದಲಿತರನ್ನು ಜಾಗೃತಿಗೊಳಿಸಿದರು ಇಷ್ಟೆ ಅಲ್ಲದೆ ಮನುಸ್ಮೃತಿ ದಹನ, ನಾಸಿಕದ ಕಾಳಿಕಾ ದೇವಸ್ಥಾದ ಪ್ರವೇಶದ ಹೋರಾಟಗಳಲ್ಲಿದೆ ನಿಮ್ಮ ವರ್ಗದ'ರಿಗಾಗಿ, ರಾಜಕೀಯ ಹಕ್ಕುಗಳಿಗಾಗಿ, 1930 ರ ಪ್ರತ್ಯೇಕ ಮೀಸ'ಲಾತಿ ಹೋರಾಟ (1930–31 ಅವಧಿ) ಹಿಂದು ಧರ್ಮ ತೊರೆದು ಬೇರೊಂದು ಧರ್ಮ ಸೇರುವ ಘೋಷಣೆ (1935) ಯನ್ನು ಮಾಡಿದರು. ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಅಂಬೇಡ್ಕರರವರು ಮಾಡಿದ ಪ್ರಯತ್ನಗಳು ಅವಿಸ್ಮರಣೀಯವಾದವು.

ಶೋಷಣೆಯಾದ ಜನರನ್ನು ಕುರಿತು ಅಬೇಡ್ಕರ ಹೇಳುವಂತೆ 'ಸಮಾಜದ ಸದಸ್ಯದ ನಡುವೇ ಹೊಂದಾಣಿಕೆಯನ್ನು ಜೀವನವನ್ನು ಸ್ವಾತಂತ್ರ್ಯ, ಸಮಾನತೆ, ಸೋದರತ್ವವನ್ನು ಆದರಿಸಿ ಪರಿಗಣನೆಯಿಂದ ವಿಚಾರ ಮಾಡಬೇಕು. 'ಪ್ರೇಂಚ್ ದಾರ್ಶನಿಕ ಕಾರ್ಲೈಲ್' ಹೇಳುವಂತೆ ಜನ ಒಟ್ಟುಗೋಡಿದರೆ ಧ್ವನಿತುಂಬಾ ಪರಿಣಾಮಕಾರಿಯಾದುದ್ದಾಗಿರುತ್ತದೆ. ಎಂದು ಅಭಿಪ್ರಾಯ ಪಡುತ್ತಾರೆ. ಅಂದರೆ ಅಬೇಡ್ಕರರವರ' ಸಂಘಟನೆ'ಯಲ್ಲಿ ಬಲವಿದೆ. ಸಂಘಟನಾತ್ಮಕವಾಗಿ ಯಾವ ಕಾರ್ಯ ಬೇಕಾದರೂ ಸಾಧಿಸಬಹುದು. ಯಾವುದೇ ಸಮಸ್ಯೆಗೆ ಸಂಘಟನಾತ್ಮಕವಾಗಿ ಪ್ರಯತ್ನಿಸಿದರೆ ಅದರ ಫಲ ದೊರೆಯುತ್ತದೆ. ಹೀಗೆ ಬುದ್ಧನಿಂದಲೇ ದಲಿತ ಚಳವಳಿ ಮೌನವಾಗಿ ಪ್ರಾರಂಭವಾಗಿ ಬಸವಣ್ಣನ ಕಾಲಕ್ಕೆ ಕಟ್ಟೆಯೊಡೆದು ಅಂಬೇಡ್ಕರರು ಇದನ್ನು ವಿಶ್ವವಿಖ್ಯಾತಿಯಾಗಿ ಹರಡುವಂತೆ ಮಾಡಿದರು.

**ಅಡಿಟಿಪ್ಪಣಿ :**


1. ಪ್ರಧಾನ ಗುರುದತ್.(ಸಂ)ಡಾ.ಬಾಬಾ ಸಾಹೇಬ ಅಂಬೇಡ್ಕರ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು. ಸಂಪುಟ – 1 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
2. ಸಿ.ಎಚ್.ರಾಜಶೇಖರ:ಬುದ್ಧ ಜ್ಞಾನದ ಔಷಧಕ್ಕೆ ಸಂಭಾವನೆ ಇಲ್ಲಂದ ಮತ್ತು ಇತರೆ ಬೆಳಕಿನ ಕಥೆಗಳು
3. ಡಾ.ಎಚ್.ಟಿ.ಪೋತೆ ಹಾಗೂ ಡಾ.ಜಗನ್ನಾಥ ಸಿಂಧೆ: ಬೆಂದವರು: ಪಲ್ಲವಿ ಪ್ರಕಾಶನ ಗುಲ್ಬರ್ಗಾ
4. ಡಾ.ಎಚ್.ಎಸ್.ಶ್ರೀಮತಿ: ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ:ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಡಾ.ಅರವಿಂದ ಮಾಲಗತ್ತಿ: ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನ –ಪು 52–53.
6. ಡಾ. ಅರವಿಂದ ಮಾಲಗತ್ತಿ:ಡಾ. ಅಂಬೇಡ್ಕರ ವಿಚಾರಧಾರೆ. ಪು. 223.